# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1029 (1169) |
| ಉತ್ತರಿಸುವ ದಿನಾಂಕ | : | 15.12.2023 |
| ಉತ್ತರಿಸುವವರು | : | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕೇಂದ್ರ ಸರ್ಕಾರದ 2ನೇ ಹಂತದ ಸ್ವಚ್ಛ ಭಾರತ್ ಅಭಿಯಾನ – ಗ್ರಾಮೀಣ (ಎಸ್.ಬಿ.ಎಂ-ಜಿ) ಅನುಷ್ಠಾನಗೊಳಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು; | ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಹಂತ-2 ಅನ್ನು 2019-20ರಿಂದ ಜಾರಿಗೆ ತಂದಿದ್ದು, ಈ ಯೋಜನೆಯಡಿ ಬಯಲು ಬಹಿರ್ದೆಸೆ ಮುಕ್ತ ಸುಸ್ಥಿರತೆ (ODF Plus Sustainability) ಕಾಯ್ದುಕೊಳ್ಳಲು - ಕೆಳಕಂಡ ಘಟಕಾಂಶಗಳನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಅನುಷ್ಠಾನ ಮಾಡಲು ಮಾರ್ಗಸೂಚಿಯಲ್ಲಿ ಅವಕಾಶ ನೀಡಲಾಗಿದ್ದು, ಅದರಂತೆ ಅನುಷ್ಠಾನ ಮಾಡಲಾಗುತ್ತಿದೆ.<br>1. ವೈಯಕ್ತಿಕ ಗೃಹ ಶೌಚಾಲಯಗಳ ನಿರ್ಮಾಣಕ್ಕೆ ಪ್ರೋತ್ಸಾಹಧನ.<br>2. ಸಮುದಾಯ/ಸಾರ್ವಜನಿಕ ಶೌಚಾಲಯಗಳ ನಿರ್ಮಾಣ.<br>3. ಘನ ತ್ಯಾಜ್ಯ ನಿರ್ವಹಣೆ.<br>4. ದ್ರವತ್ಯಾಜ್ಯ ನಿರ್ವಹಣೆ.<br>5. ಮಲತ್ಯಾಜ್ಯ ನಿರ್ವಹಣೆ.<br>6. ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಗಳ ನಿರ್ಮಾಣ.<br>7. ಗೋಬರ್-ಧನ್ ಘಟಕಗಳ ನಿರ್ಮಾಣ.<br>8. ಮಾಹಿತಿ ಶಿಕ್ಷಣ ಸಂವಹನ ಹಾಗೂ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳ ಅನುಷ್ಠಾನ. |
| (ಆ) | ಈ 2ನೇ ಹಂತದ ಅಭಿಯಾನಕ್ಕೆ 2022-23ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒದಗಿಸಿರುವ ಅನುದಾನ ಎಷ್ಟು ಮತ್ತು ಈ ಅನುದಾನವನ್ನು ಯಾವ ಆಧಾರದ ಮೇಲೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ; (ಪೂರ್ಣ ವಿವರ ನೀಡುವುದು) | 2022-23ನೇ ಸಾಲಿನಲ್ಲಿ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ 2ನೇ ಹಂತದ ಅಭಿಯಾನಕ್ಕೆ ಕೇಂದ್ರ ಸರ್ಕಾರವು ರೂ.155.84 ಕೋಟಿಗಳು ಹಾಗೂ ರಾಜ್ಯ ಸರ್ಕಾರವು ರೂ.129.38 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br>ಸದರಿ ಅನುದಾನವನ್ನು ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ವೈಯಕ್ತಿಕ ಗೃಹ ಶೌಚಾಲಯ, ಸಮುದಾಯ ಶೌಚಾಲಯ, ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಯಲ್ಲಿ ಮಾರ್ಗಸೂಚಿಯ ಮಾನದಂಡದ ಆಧಾರದ ಮೇಲೆ ವೆಚ್ಚ ಮಾಡಲು ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗಿದೆ. |
| (ಇ) | ರಾಜ್ಯದಲ್ಲಿ ವ್ಯಕ್ತಿಗತ ಗೃಹ ಶೌಚಾಲಯ ನಿರ್ಮಾಣಕ್ಕೆ 2019-20 ರಿಂದ ಇದುವರೆಗೂ ನೀಡಿರುವ ಆರ್ಥಿಕ ನೆರವು ಎಷ್ಟು; ಜಿಲ್ಲಾವಾರು ಮತ್ತು | ವೈಯಕ್ತಿಕ ಗೃಹ ಶೌಚಾಲಯಗಳ ನಿರ್ಮಾಣಕ್ಕೆ ನೀಡಿರುವ ಪ್ರೋತ್ಸಾಹಧನದ ಜಿಲ್ಲಾವಾರು ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |

| | | |
|---|---|---|
| | ತಾಲ್ಲೂಕುವಾರು ಪೂರ್ಣ ಮಾಹಿತಿ ನೀಡುವುದು; | |
| (ಈ) | ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಸ್ವಚ್ಛ ಭಾರತ್ ಅಭಿಯಾನ –ಗ್ರಾಮೀಣ (ಎಸ್.ಬಿ.ಎಂ-ಜಿ) ನಲ್ಲಿ ಘನ ಮತ್ತು ದ್ರವರೂಪ ತ್ಯಾಜ್ಯಗಳ ನಿರ್ವಹಣೆಗೆ ಆರ್ಥಿಕ ತಾಂತ್ರಿಕ ಮತ್ತು ಸಾಮರ್ಥ್ಯ ವೃದ್ಧಿಗೆ ದೊರೆತಿರುವ ನೆರವುಗಳು ಯಾವುವು; ಮತ್ತು ಇವುಗಳ ಅನುಷ್ಠಾನವನ್ನು ಯಾವ ಸಂಸ್ಥೆಯ ಉಸ್ತುವಾರಿಯಲ್ಲಿ ನಡೆಸಲಾಗುತ್ತಿದೆ; ಈ ಬಗ್ಗೆ ಪೂರ್ಣ ವಿವರ ನೀಡುವುದು; | ಸ್ವಚ್ಛ ಭಾರತ್ ಮಿಷನ್-ಗ್ರಾಮೀಣ ಯೋಜನೆಯ ಹಂತ-2ರ ಮಾರ್ಗಸೂಚಿಯಲ್ಲಿ ಗ್ರಾಮೀಣ ಪ್ರದೇಶದ ಜನಸಂಖ್ಯೆ ಆಧಾರದ ಮೇಲೆ ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಗೆ ಅನುದಾನದ ಬಳಕೆಗೆ ಅವಕಾಶ ಕಲ್ಪಿಸಲಾಗಿದೆ.<br>1. 5000 ಜನಸಂಖ್ಯೆ ಇರುವಂತಹ ಗ್ರಾಮಕ್ಕೆ ಘನ ತ್ಯಾಜ್ಯ ನಿರ್ವಹಣೆಗೆ ತಲಾ 60.00 ರೂಪಾಯಿಗಳು ಹಾಗೂ ದ್ರವ ತ್ಯಾಜ್ಯ ನಿರ್ವಹಣೆಗೆ ತಲಾ 280.00 ರೂಪಾಯಿಗಳ ಬಳಕೆಗೆ ಅವಕಾಶ ಕಲ್ಪಿಸಲಾಗಿದೆ.<br>2. ಅದೇ ರೀತಿ 5000 ಮೇಲ್ಪಟ್ಟ ಜನಸಂಖ್ಯೆ ಇರುವಂತಹ ಗ್ರಾಮಕ್ಕೆ ಘನ ತ್ಯಾಜ್ಯ ನಿರ್ವಹಣೆಗೆ ತಲಾ 45.00 ರೂಪಾಯಿಗಳು ಹಾಗೂ ದ್ರವ ತ್ಯಾಜ್ಯ ನಿರ್ವಹಣೆಗೆ ತಲಾ 660.00 ರೂಪಾಯಿಗಳ ಬಳಕೆಗೆ ಅವಕಾಶ ಕಲ್ಪಿಸಲಾಗಿದೆ.<br>3. ತಾಲ್ಲೂಕು ಮಟ್ಟದ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕ ನಿರ್ಮಾಣಕ್ಕೆ ರೂ. 16.00ಲಕ್ಷಗಳನ್ನು ಒದಗಿಸಲಾಗಿದೆ.<br>4. ಮಲ ತ್ಯಾಜ್ಯ ನಿರ್ವಹಣಾ ಘಟಕ ನಿರ್ಮಾಣಕ್ಕೆ ತಲಾ ರೂ. 230.00 ರೂಪಾಯಿಗಳನ್ನು ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. |
| (ಉ) | ರಾಜ್ಯದಲ್ಲಿ ಘನ ಮತ್ತು ದ್ರವ ತ್ಯಾಜ್ಯಗಳ ನಿರ್ವಹಣೆಗೆ ಎಷ್ಟು ಗ್ರಾಮಗಳಲ್ಲಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗಿದೆ ಮತ್ತು ಇವುಗಳ ಕಾರ್ಯನಿರ್ವಹಣೆ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಘನ ತ್ಯಾಜ್ಯಗಳ ನಿರ್ವಹಣೆಗೆ ಸಂಬಂಧಿಸಿದಂತೆ 4049 ಗ್ರಾಮ ಪಂಚಾಯಿತಿಗಳಲ್ಲಿ ತ್ಯಾಜ್ಯ ಸಂಗ್ರಹಣಾ ವಿಲೇವಾರಿ ಮತ್ತು ನಿರ್ವಹಣೆಗೆ ಸ್ವಚ್ಛ ಸಂಕೀರ್ಣ ಘಟಕಗಳನ್ನು ನಿರ್ಮಾಣ ಮಾಡಲು ಅನುಮೋದನೆ ನೀಡಿದ್ದು, ಈ ಪೈಕಿ 3073 ಘಟಕಗಳು ಪೂರ್ಣಗೊಂಡಿದ್ದು, ಬಾಕಿ 976 ಘಟಕಗಳು ನಿರ್ಮಾಣ ಹಂತದಲ್ಲಿದ್ದು, ಶೀಘ್ರದಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.<br>(ಜಿಲ್ಲಾವಾರು ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ.) |

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

ಅನುಬಂಧ-1

2019-20 ರಿಂದ 2023-24ನೇ ಸಾಲಿನ ವರೆಗೆ ವೈಯಕ್ತಿಕ ಗೃಹ ಶೌಚಾಲಯಗಳ ನಿರ್ಮಾಣಕ್ಕೆ ಒದಗಿಸಿರುವ ಅನುದಾನದ ವಿವರ

| ಕ್ರ.ಸಂ. | ಜಿಲ್ಲೆ | ಆರ್ಥಿಕ ಪ್ರಗತಿ (ರೂ.ಲಕ್ಷಗಳಲ್ಲಿ) | | | | |
|---|---|---|---|---|---|---|
| | | 2019-20 | 2020-21 | 2021-22 | 2022-23 | 2023-24 |
| 1 | ಬಾಗಲಕೋಟೆ | 741.75 | 986.49 | 378.48 | 18.21 | 1.80 |
| 2 | ಬಳ್ಳಾರಿ | 3200.15 | 1061.01 | 520.86 | 19.18 | 17.20 |
| 3 | ಬೆಳಗಾವಿ | 789.19 | 2244.78 | 480.69 | 132.34 | 4.80 |
| 4 | ಬೆಂಗಳೂರು (ಗ್ರಾ) | 109.47 | 120.69 | 217.38 | 19.08 | 12.32 |
| 5 | ಬೆಂಗಳೂರು (ನ) | 3.06 | 6.12 | 34.35 | 6.3 | 0.00 |
| 6 | ಬೀದರ್ | 695.68 | 582.18 | 174.51 | 42.1 | 10.20 |
| 7 | ಚಾಮರಾಜನಗರ | 782.07 | 1071.06 | 473.81 | 44.51 | 8.67 |
| 8 | ಚಿಕ್ಕಬಳ್ಳಾಪುರ | 794.27 | 146.91 | 194.04 | 23.95 | 5.08 |
| 9 | ಚಿಕ್ಕಮಗಳೂರು | 642.98 | 107.73 | 197.82 | 40.95 | 14.12 |
| 10 | ಚಿತ್ರದುರ್ಗ | 2681.54 | 1493.94 | 646.14 | 315.06 | 24.25 |
| 11 | ದಾವಣಗೆರೆ | 657.03 | 828.6 | 480.15 | 69.42 | 21.00 |
| 12 | ಧಾರವಾಡ | 2138.65 | 873.9 | 758.8 | 19.77 | 0.20 |
| 13 | ಗದಗ | 582.21 | 265.68 | 367.59 | 46.95 | 10.00 |
| 14 | ಹಾಸನ | 1489.35 | 660.06 | 448.53 | 21.17 | 0.60 |
| 15 | ಹಾವೇರಿ | 1220.43 | 529.56 | 510.63 | 88.94 | 26.00 |
| 16 | ಕಲಬುರಗಿ | 3019.2 | 2966.97 | 1051.53 | 90.57 | 8.40 |
| 17 | ಕೊಡಗು | 80.73 | 43.11 | 36.24 | 14.9 | 3.40 |
| 18 | ಕೋಲಾರ | 140.95 | 170.28 | 562.92 | 40.89 | 17.60 |
| 19 | ಕೊಪ್ಪಳ | 1259.54 | 728.31 | 569.28 | 4.22 | 10.16 |
| 20 | ಮಂಡ್ಯ | 269.38 | 352.08 | 279.96 | 26.14 | 4.40 |
| 21 | ಮಂಗಳೂರು (ದ.ಕ) | 63.9 | 28.05 | 31.2 | 7.23 | 1.00 |
| 22 | ಮೈಸೂರು | 862.94 | 1291.32 | 197.31 | 31.89 | 12.80 |
| 23 | ರಾಯಚೂರು | 1787.23 | 1919.25 | 445.47 | 59.85 | 12.56 |
| 24 | ರಾಮನಗರ | 821.01 | 288.96 | 611.22 | 89.54 | 13.00 |
| 25 | ಶಿವಮೊಗ್ಗ | 1245.94 | 398.22 | 571.26 | 54.41 | 20.40 |
| 26 | ತುಮಕೂರು | 1198.32 | 1030.17 | 606.48 | 79.32 | 12.20 |
| 27 | ಉಡುಪಿ | 48.36 | 9.06 | 137.22 | 34.81 | 10.20 |
| 28 | ಉತ್ತರ ಕನ್ನಡ | 1080.39 | 124.83 | 168.33 | 12.43 | 3.04 |
| 29 | ವಿಜಯಪುರ | 2792.23 | 1417.41 | 318.3 | 74.85 | 12.12 |
| 30 | ಯಾದಗಿರಿ | 2084.84 | 1558.5 | 888.45 | 73.85 | 7.20 |
| 31 | ವಿಜಯನಗರ | | | | 57.60 | 11.90 |
| ಒಟ್ಟು | | 33282.79 | 23305.23 | 12358.95 | 1602.83 | 304.72 |

## ಅನುಬಂಧ-2

### ಜಿಲ್ಲಾವಾರು ಘನ ತ್ಯಾಜ್ಯ ನಿರ್ವಹಣಾ ಘಟಕಗಳ ಪ್ರಗತಿಯ ವಿವರ

| ಕ್ರ.ಸಂ | ಜಿಲ್ಲೆ | ಘನ ತ್ಯಾಜ್ಯ ನಿರ್ವಹಣಾ ಘಟಕಗಳ ನಿರ್ಮಾಣಕ್ಕೆ ಅನುಮೋದನೆ ನೀಡಿರುವ ಗ್ರಾ.ಪಂ.ಗಳ ಸಂಖ್ಯೆ | ಘನ ತ್ಯಾಜ್ಯ ನಿರ್ವಹಣಾ ಘಟಕಗಳ ನಿರ್ಮಾಣ ಪೂರ್ಣಗೊಂಡಿರುವ ಗ್ರಾ.ಪಂ.ಗಳ ಸಂಖ್ಯೆ | ಪ್ರಗತಿಯಲ್ಲಿರುವ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| 1 | BAGALKOT | 121 | 74 | 47 |
| 2 | BALLARI | 59 | 55 | 4 |
| 3 | BELAGAVI | 226 | 174 | 52 |
| 4 | BENGALURU RURAL | 91 | 82 | 9 |
| 5 | BENGALURU URBAN | 49 | 42 | 7 |
| 6 | BIDAR | 138 | 53 | 85 |
| 7 | CHAMARAJANAGARA | 50 | 30 | 20 |
| 8 | CHIKKABALLAPURA | 54 | 53 | 1 |
| 9 | CHIKKAMAGALURU | 132 | 64 | 68 |
| 10 | CHITRADURGA | 145 | 107 | 38 |
| 11 | DAVANGERE | 166 | 142 | 24 |
| 12 | DHARWAD | 144 | 105 | 39 |
| 13 | GADAG | 122 | 100 | 22 |
| 14 | HASSAN | 187 | 165 | 22 |
| 15 | HAVERI | 181 | 151 | 30 |
| 16 | KALABURAGI | 219 | 87 | 132 |
| 17 | KODAGU | 99 | 96 | 3 |
| 18 | KOLAR | 110 | 89 | 21 |
| 19 | KOPPAL | 53 | 52 | 1 |
| 20 | MANDYA | 149 | 97 | 52 |
| 21 | MANGALORE (DK) | 185 | 157 | 28 |
| 11 | MYSURU | 83 | 69 | 14 |
| 23 | RAICHUR | 86 | 76 | 10 |
| 24 | RAMANAGARA | 59 | 51 | 8 |
| 25 | SHIVAMOGGA | 194 | 190 | 4 |
| 26 | TUMAKURU | 273 | 187 | 86 |
| 27 | UDUPI | 136 | 136 | 0 |
| 28 | UTTARA KANNADA | 174 | 148 | 26 |
| 29 | VIJAYANAGARA | 73 | 64 | 9 |
| 30 | VIJAYAPUR | 204 | 114 | 90 |
| 31 | YADGIR | 87 | 63 | 24 |
| Total | | 4049 | 3073 | 976 |